# ಆರ್ಕಿಡ್‌ಗಳ ವಿಶ್ವರೂಪ



■ ಪ್ರಕಾಶ ಎಸ್. ಮನ್ನಂಗಿ





ಆರ್ಕಿಡ್‌ಗಳದ್ದೇ ಒಂದು ವಿಶಿಷ್ಟ ಜಗತ್ತು. ಎಲ್ಲ ಸಮಾರಂಭಗಳಿಗೆ ಶುಭ ಹಾರೈಸಲು, ಸಮಾರಂಭದ ಅಂದ ಹೆಚ್ಚಿಸಲು ಆರ್ಕಿಡ್‌ಗಳು ಬೇಕೇ ಬೇಕು.

ಜಗತ್ತಿನಾದ್ಯಂತ ಆರ್ಕಿಡ್‌ನ ಸಾವಿರಾರು ಪ್ರಭೇದಗಳಿವೆ. ಉಷ್ಣವಲಯದ ಅರಣ್ಯದಲ್ಲಿ ಈ ಸಂಖ್ಯೆ ಹೆಚ್ಚು. ಒಂದು ಅಂದಾಜಿನ ಮೇರೆಗೆ ಜಗತ್ತಿನಲ್ಲಿ 35 ಸಾವಿರಕ್ಕೂ ಹೆಚ್ಚಿನ ಆರ್ಕಿಡ್ ಪ್ರಭೇದಗಳಿವೆ ಎನ್ನಲಾಗಿದೆ.

ಭಾರತದ ಕರಾವಳಿಯಲ್ಲಿ ಮತ್ತು ಈಶಾನ್ಯ ರಾಜ್ಯಗಳಲ್ಲಿ ಆರ್ಕಿಡ್‌ನ ನೂರಾರು ಪ್ರಭೇದಗಳು ಕಾಣಸಿಗುತ್ತವೆ. ಬೇರೆ ಬೇರೆ ಆಕಾರ, ಗಾತ್ರ ಬಣ್ಣಗಳಿಂದ ಇವು ಮನಸೆಳೆಯುತ್ತವೆ. ಆರ್ಕಿಡ್‌ಗಳು ಸುಂದರವೇನೋ ಹೌದು. ಆದರೆ ದುರ್ವಾಸನೆ ಬೀರುವ ಪ್ರಭೇದಗಳೂ ಇದರಲ್ಲಿವೆ.

ಇವು ನೆಲದ ಮೇಲೆ ಬೆಳೆಯುವುದಕ್ಕಿಂತ ಹೆಚ್ಚಾಗಿ ಮರದ ಮೇಲೆ ಪರೋಪಜೀವಿಗಳಂತೆ ಬೆಳೆಯುತ್ತವೆ. ಆದರೆ ತಾನು ಬೆಳೆದ ಮರದಿಂದ ಆಹಾರವನ್ನು ಪಡೆಯದೆ ಸ್ವತಃ ಆಹಾರವನ್ನು ತಯಾರಿಸಿಕೊಳ್ಳುತ್ತದೆ. ಪುಷ್ಪಪತ್ರಗಳು ಹೂ ಅರಳುವುದಕ್ಕೂ ಮುನ್ನ ಮೊಗ್ಗನ್ನು ಆವರಿಸಿರುತ್ತವೆ. ಎರಡು ಪುಷ್ಪದಳಗಳಲ್ಲಿ ಒಂದು ದಳ ತುಟಿಯಂತಿರುತ್ತದೆ.

ಆರ್ಕಿಡ್‌ಗಳಲ್ಲಿ ಸಂತಾನಾಭಿವೃದ್ಧಿ ತುಂಬಾ ಕಷ್ಟಕರ. ಇದಕ್ಕಾಗಿಯೇ ಅವು ಹಲವು ಉಪಾಯಗಳನ್ನು ಕಂಡುಕೊಂಡಿವೆ. ಆರ್ಕಿಡ್‌ಗಳು ಪರಾಗಸ್ಪರ್ಶಕ್ಕಾಗಿ ಪತಂಗಗಳು ಮತ್ತು ಜೇನು ನೊಣಗಳನ್ನು ಅವಲಂಬಿಸಿವೆ. ಗಂಡು ನೊಣಗಳನ್ನು ಆಕರ್ಷಿಸಲು ಕೆಲವು ಆರ್ಕಿಡ್‌ಗಳು ಹೆಣ್ಣು ನೊಣಗಳಂತೆ ಕಾಣಿಸಿಕೊಂಡರೆ ಇನ್ನು ಕೆಲವು ಬೇರೆ ಬೇರೆ ಪ್ರಾಣಿಗಳಂತೆ ಕಾಣಿಸಿಕೊಳ್ಳುತ್ತವೆ.

ಬಹಳಷ್ಟು ದೇಶಗಳು ಆರ್ಕಿಡ್‌ಗಳನ್ನು ತಮ್ಮ ಲಾಂಛನಗಳಂತೆ ಗುರುತಿಸಿ–ಕೊಂಡಿವೆ. ಶ್ರೀಲಂಕಾದ 100 ರೂಪಾಯಿ ನೋಟಿನ ಮೇಲೆ, ಸಿಂಗಾಪುರದ 5 ಡಾಲರ್ ನೋಟಿನ ಮೇಲೆ ಆರ್ಕಿಡ್‌ಗಳ ಚಿತ್ರಗಳಿವೆ.

ಆರ್ಕಿಡ್‌ನ ಲೋಕ ವೈವಿಧ್ಯಮಯ. ಇಲ್ಲಿವೆ ಕೆಲವು ಕುತೂಹಲಕರ ವೈವಿಧ್ಯಗಳು.

## ಗಿಳಿ ಆರ್ಕಿಡ್

ಇವು ಗಿಳಿಯಂತೆ ಕಾಣುತ್ತವೆ. ಕೊಕ್ಕರೆ, ಪುಕ್ಕಗಳೂ ಕಾಣಿಸುತ್ತವೆ. ಒಂದರ ಬದಿಗೊಂದು ಗಿಳಿ ಕುಳಿತ ಹಾಗಿದೆ. ಇದರ ಸಸ್ಯಶಾಸ್ತ್ರೀಯ ಹೆಸರು ಇಂಪೇಶನ್ಸ್ ಸಿಟ್ಟಾಸಿನಾ.



## ಮಂಗನ ಮುಖ

ಪೆರು ಮತ್ತು ಆಗ್ನೇಯ ಈಕ್ವೆಡಾರ್‌ಗಳಲ್ಲಿ ಕಂಡುಬರುವ ಮಂಗನ ಮುಖದ ಆರ್ಕಿಡ್‌ಗಳು ಕೀಟಲೆ ಮಾಡುವ ಮಂಗನಂತಿವೆ. ಡ್ರ್ಯಾಕುಲಾ ಸಿಮಿಯಾ, ಆರ್ಕಿಸ್ ಸಿಮಿಯಾ ಎಂದು ಕರೆಯಲ್ಪಡುವ ಈ ಹೂಗಳು ಪೂರ್ಣ ಅರಳಿದಾಗ ಕಿತ್ತಳೆಯ ಸುವಾಸನೆ ಬೀರುತ್ತವೆ.

(10ನೇ ಪುಟ ನೋಡಿ)